**ದೋ.ಸಾ. : 10 ಪ್ರಾ.ಸಾ. : 03**

**ದಿನಾಂಕಃ 30–11–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಎಲ್.ಎ.ಡಿ.ಸಿ. ವಕೀಲರಿಂದ**

14. ನಿಪಿ–20 ಪೋಟೋದಲ್ಲಿ ತೆಂಗಿನ ಮರಗಳು ಕಾಣುತ್ತವೆ ಎಂದರೆ ಸರಿ. ಚಾಸಾ–14 ರವರ ಮನೆಯ ಕಾಂಪೌಂಡಿನಲ್ಲಿ ಸಣ್ಣ–ಪುಟ್ಟ ಗಿಡಗಳು ಇರುತ್ತವೆ ಎಂದರೆ ಸರಿ. ಅವರ ಮನೆಯ ಕಾಂಪೌಂಡಿನಲ್ಲಿ ಸಣ್ಣ–ಪುಟ್ಟ ಗಿಡಗಳು ಇರುವ ಕಾರಣ ಆರೋಪಿಯ ಮನೆ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–14 ರವರ ಮನೆಗೆ ಅಪರಿಚಿತರು ಬಂದು ಹೋಗುತ್ತಾರೆ ಎಂದರೆ ಸರಿಯಲ್ಲ. ಚಾಸಾ–14 ರವರು ಯಾವುದೇ ವ್ಯವಹಾರ ಅಥವಾ ಕಾಂಟ್ರ್ಯಾಕ್ಟರ್ ಕೆಲಸ ಮಾಡುವುದಿಲ್ಲ. ಚಾಸಾ–14 ರವರ ಮನೆಯ ಹಿಂದುಗಡೆ ರಸ್ತೆ ನಿರ್ಮಾಣ

ಮಾಡುವುದಕ್ಕೆ ಅಸಪ್ ಅಲಿ ಎನ್ನುವರು ಕಾಂಟ್ರ್ಯಾಕ್ಟ್ ಪಡೆದಿರುತ್ತಾರೆ. ಚಾಸಾ-14 ರವರು ಮಾತನಾಡುತ್ತಿದ್ದ ಕಾಂಟ್ರ್ಯಾಕ್ಟರ್ ದಾರನ ಹೆಸರನ್ನು ನಾನು ಪೊಲೀಸರಿಗೆ ಹೇಳಿಲ್ಲ. ಚಾಸಾ-14 ರವರ ಮನೆಗೆ ಬಹಳಷ್ಟು ಜನ ಅಪರಿಚಿತರು ಬಂದು ಹೋಗುತ್ತಿದ್ದ ಕಾರಣ, ಆರೋಪಿ ಅದನ್ನು ಆಕ್ಷೇಪಿಸುತ್ತಿದ್ದ ಎಂದರೆ ಸರಿಯಲ್ಲ. ಈ ವಿಷಯವಾಗಿ ಚಾಸಾ-14 ರವರು ಆರೋಪಿಯ ಜೊತೆ ಜಗಳ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ-14 ರವರ ಮನೆಗೆ ಅಪರಿಚಿತರು ಬಂದು ಹೋಗುತ್ತಿದ್ದ ವಿಷಯವನ್ನು ಆರೋಪಿ ನನಗೆ ಹಾಗೂ ಮೃತ ಅಬುತಾಲಿಬ್ ರವರಿಗೂ ಸಹ ಹೇಳಿದ್ದ ಎಂದರೆ ಸರಿಯಲ್ಲ.

15. ಚಾಸಾ-14 ರವರು ನನ್ನ ಸಂಬಂಧಿಕರಾದ ಕಾರಣ ಹಾಗೂ ನಾವು ಅವರ ಮನೆಗೆ ನೀರು ಹೋಗುತ್ತಿದ್ದ ಕಾರಣ, ನಾವುಗಳು ಚಾಸಾ-14 ರವರನ್ನು ವಿಚಾರಿಸಿರುವುದಿಲ್ಲ ಎಂದರೆ ಸಾಕ್ಷಿಯು ಆ ರೀತಿ ಯಾರು ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಚಾಸಾ-14 ರವರು ನಮ್ಮ ಸಂಬಂಧಿಕರಾದ ಕಾರಣ, ಆರೋಪಿಯೊಂದಿಗೆ ಜಗಳ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಆಕೆ ನಮ್ಮ ಸಂಬಂಧಿಕರಾದ ಕಾರಣ, ಆಕೆ ಕೊಟ್ಟ ದೂರಿಗೆ ಸಹಕಾರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-14 ರವರು ಕೊಟ್ಟ ದೂರು ಸುಳ್ಳು ದೂರಾಗಿರುತ್ತದೆ ಎಂದು ನನ್ನ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಮೃತ ಅಬುತಾಲಿಬ್ ರವರು ಸ್ವಲ್ಪ ಸಿಟ್ಟಿನವರು ಎಂದರೆ ಸರಿಯಲ್ಲ. ಮೃತ ಅಬುತಾಲಿಬ್ ರವರ ಮೇಲೆ ಒಂದು ಕೊಲೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

16. ಚಾಸಾ-1 ರವರು ಮೃತ ಅಬುತಾಲಿಬ್ ರವರ 2 ನೇ ಹೆಂಡತಿ ಎಂದರೆ ಸರಿ. ಅವರ ಮೊದಲನೇ ಹೆಂಡತಿ ಜೀವಂತ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೃತ ಅಬುತಾಲಿಬ್ ರವರು ತನ್ನ ಮೊದಲನೇ ಹೆಂಡತಿಗೆ ಕಿರುಕುಳ ನೀಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆಕೆಯ ಮೇಲೆ ಸೀಮೆಎಣ್ಣೆ ಸುರಿದು, ಕೊಲೆ ಮಾಡಲು ಪ್ರಯತ್ನಿಸಿದ್ದ ಹಾಗೂ ಈ ಬಗ್ಗೆ ಪ್ರಕರಣ ಕೂಡ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಮೃತ ಅಬುತಾಲಿಬ್ ರವರು ತನ್ನ ಮೊದಲನೇ ಹೆಂಡತಿಗೆ ಕಿರುಕುಳ ನೀಡಿ, ಸೀಮೆಎಣ್ಣೆ ಸುರಿದು, ಕೊಲೆ ಮಾಡಲು ಪ್ರಯತ್ನಿಸಿದ್ದ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ತನ್ನ ಎರಡು ಕೈಗಳನ್ನು ಮೇಲೆ ಎತ್ತಿ ದೊಣ್ಣೆಯಿಂದ ಬಲವಾಗಿ ಹೊಡೆದರೆ, ಆತ ಮೃತ ಪಡುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

17. ಗಲಾಟೆ ನಡೆಯುವ ಸಮಯದಲ್ಲಿ ಮೃತ ಅಬುತಾಲಿಬ್ ರವರು ಮೊದಲಿಗೆ ಆರೋಪಿಗೆ ದೊಣ್ಣೆಯಿಂದ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿ ತನ್ನ ಕೈಯಲ್ಲಿ ಚಾಕು ಹಿಡಿದುಕೊಂಡು ಬಂದು, ಅಬುತಾಲಿಬ್‌ರ ಮೇಲೆ ಹಲ್ಲೆ ಮಾಡಲು ಮುಂದಾದಾಗ, ಅಬುತಾಲಿಬ್‌ರು ದೊಣ್ಣೆಯಿಂದ, ಆರೋಪಿ ಚಾಕು ಹಿಡಿದಿದ್ದ ಕೈಗೆ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯ ಕೈಯಲ್ಲಿ ಯಾವುದೇ ಚಾಕು ಇರಲಿಲ್ಲ ಎಂದರೆ ಸರಿಯಲ್ಲ. ಅಬುತಾಲಿಬ್ ಮೊದಲಿಗೆ ಆರೋಪಿಯ ತಲೆಗೆ ಹೊಡೆದಿದ್ದರಿಂದ,ಆತನಿಂದ ತಪ್ಪಿಸಿಕೊಳ್ಳಲು, ಆರೋಪಿ ಅಬುತಾಲಿಬ್ ನನ್ನು ದೂಡಿರುತ್ತಾನೆ ಎಂದರೆ ಸರಿಯಲ್ಲ. ಅಬುತಾಲಿಬ್ ಆರೋಪಿಗೆ ಮುದ್ದೆ ಮಾಲು-7 ಅಡಿಕೆ ಮರದ ದಬ್ಬೆಯಿಂದ ಹೊಡೆದತಂಹ ಏಟು ಆತನ ತಲೆಗೆ ಬಿದ್ದಿದ್ದರೆ, ಆರೋಪಿ ಸಾಯುವ ಸಾಧ್ಯತೆ ಇತ್ತು ಎಂದರೆ ಸರಿಯಲ್ಲ. ಆರೋಪಿ ತನ್ನನ್ನು ರಕ್ಷಿಸಿಕೊಳ್ಳಲು ಅಬುತಾಲಿಬ್ ರವರನ್ನು ದೂಡಿದ್ದರಿಂದ, ಆತ ಕಲ್ಲಿನ ಮೇಲೆ ಬಿದ್ದು ಗಾಯಗೊಂಡಿರುತ್ತಾನೆ ಎಂದರೆ ಸರಿಯಲ್ಲ. ಅಬುತಾಲಿಬ್ ಕಲ್ಲಿನ ಮೇಲೆ ಬಿದ್ದಿದ್ದರಿಂದ ತೀವ್ರ ರಕ್ತ ಸ್ರಾವವಾಗಿ ಮೃತಪಟ್ಟಿದ್ದು, ನಾವೆಲ್ಲರೂ ಸೇರಿ ಆರೋಪಿಯ ವಿರುದ್ಧ ಸುಳ್ಳು ಕೊಲೆ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಗಲಾಟೆ ನಂತರ ನಾನು ಅಂಬ್ಯುಲೇನ್ಸನ್ನು ಕರೆದಿರುವುದಿಲ್ಲ. ಚಾಸಾ-14 ರವರ ಮಾತು ಕೇಳಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಎಂದಿಗೂ ನನ್ನ ಹೆಂಡತಿಗೆ ಗುಪ್ತಾಂಗ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಅಬುತಾಲಿಬ್ 5 ಹೆಜ್ಜೆ ಮುಂದೆ ಬಂದು ಕೆಳಗೆ ಬಿದ್ದರು ಎಂದು ಹೇಳಿದ್ದಿರಾ? ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಈ ವಿಷಯವನ್ನು ಪೊಲೀಸರಿಗೆ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಆರೋಪಿಯ ಬಟ್ಟೆಗೆ ರಕ್ತ ತಾಗಿದ ವಿಷಯವನ್ನು ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ. ಆರೋಪಿಯ ಬಟ್ಟೆಗೆ ರಕ್ತ ತಾಗಿದ ವಿಷಯವನ್ನು ನಾನು ಹೊನ್ನಾವರ ನ್ಯಾಯಾಲಯದ ಮುಂದೆ ಹೇಳಿರುತ್ತೇನೆ. ಆರೋಪಿಯ ಬಟ್ಟೆಗೆ ಯಾವುದೇ ರಕ್ತ ತಾಗದೆ ಇದ್ದರೂ ತಾಗಿದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಕಾಲಕ್ಕೆ ನಾನು ನನ್ನ ಮೊಬೈಲ್ ನಿಂದ ವಿಡಿಯೋ ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು-11 ಮೊಬೈಲ್ ನಲ್ಲಿ ಇರುವ ವಿಡಿಯೋವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

18. ದಿಃ 05-05-2021 ಕ್ಕಿಂತ ಮೊದಲು ನಾನು ಪೊಲೀಸ್ ಠಾಣೆಗೆ, ಅವರನ್ನು ಭೇಟಿ ಮಾಡಿಲ್ಲ ಹಾಗೂ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಮೊಬೈಲ್ ನ್ನು ಜಪ್ತುಪಡಿಸಿಕೊಂಡ ಬಗ್ಗೆ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯ ಸಮಯದಲ್ಲಿ ಯಾವುದೇ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೊಬೈಲ್ ನ್ನು ಪೊಲೀಸರಿಗೆ ನೀಡಿದ ಸಮಯದಲ್ಲಿ ಕಲಂ 65(ಬಿ) ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು-7 ರಿಂದ ಅಬುತಾಲಿಬ್ ಆರೋಪಿಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಅಬುತಾಲಿಬ್ ತಾನು ಮನೆಯಿಂದ ಬರುವಾಗಲೇ ಬೇರೊಂದು ದಪ್ಪವಾದ ದೊಣ್ಣೆಯನ್ನು ತಂದಿದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ